21.3.22 157

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಎಸ್.ವ್ಹಿ. ಸಂಕನೂರು, ಶ್ರೀ ಆಯನೂರು ಮಂಜುನಾಥ್ ಹಾಗೂ ಶ್ರೀ ಶಶೀಲ್ ಜಿ. ನಮೋಶಿ ರವರುಗಳು ನಿಯಮ 72ರ ಸೂಚನಾ ಪತ್ರಕ್ಕೆ ಉತ್ತರಿಸುವ ಕುರಿತು.**

## ಸೂಚನೆ

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಎಸ್.ವ್ಹಿ. ಸಂಕನೂರು, ಶ್ರೀ ಆಯನೂರು ಮಂಜುನಾಥ್ ಹಾಗೂ ಶ್ರೀ ಶಶೀಲ್ ಜಿ. ನಮೋಶಿ ಅವರುಗಳು ಪ್ರೌಢಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮ 2016ರ ಪ್ರಕಾರ ಹಿಂದಿ ಪ್ರಚಾರ ಸಭಾಗಳಿಂದ ಹಿಂದಿ ಬಿ.ಇಡಿ. ಪದವಿ ಪಡೆದ ವಿದ್ಯಾರ್ಥಿಗಳು ಹಿಂದಿ ಶಿಕ್ಷಕರ ನೇಮಕಾತಿಗೆ ಅರ್ಜಿ ಸಲ್ಲಿಸಲು ಅನರ್ಹರಾಗಿರುವವರು ಇದರಿಂದ 2016ರ ಪೂರ್ವದಲ್ಲಿ ಹಿಂದಿ ಬಿ.ಇಡಿ. ಪಡೆದ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯ ಬೀದಿ ಪಾಲಾಗಿರುವ (ಸನ್ನಿವೇಶ ಉಂಟಾಗಿರುವುದರ) ಬಗ್ಗೆ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

## ಉತ್ತರ

ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ:2772/ 2011 ಮತ್ತು 69822-69826/2012 (ಎಸ್.ಕೆ.ಎ.ಟಿ)ರಲ್ಲಿ ದಿನಾಂಕ:30/07/2015ರಂದು ನೀಡಿರುವ ತೀರ್ಪಿನಲ್ಲಿ ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು 2002ರ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಭಾಷಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ನಿಗಧಿಪಡಿಸಿರುವ ಕೆಲವು ವಿದ್ಯಾರ್ಹತೆಗಳು N.C.T.E (National Council for Teacher Education) ನಿರ್ದಿಷ್ಟ ಪಡಿಸಿರುವ ವಿದ್ಯಾರ್ಹತೆಗಿಂತ ಕಡಿಮೆ ಇರುವ ಕಾರಣ 2002ರ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು ರದ್ದುಪಡಿಸಿರುತ್ತದೆ.

ಆದ್ದರಿಂದ, ಸಂಸತ್ತಿನ ಶಾಸನದ ಪ್ರಕಾರ ಸ್ಥಾಪಿತವಾದ ಸಂಸ್ಥೆಯಾದ ಎನ್.ಸಿ.ಟಿ.ಇ. ಯಿಂದ ಮಾನ್ಯತೆ ಪಡೆಯದ ಸಂಸ್ಥೆಗಳಿಂದ ಪಡೆದ ಬಿ.ಇಡಿ. ಪದವಿಯು ಶಿಕ್ಷಕರ ಹುದ್ದೆಗೆ ನೇಮಕಾತಿ ಹೊಂದಲು ಅನರ್ಹವಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಪ್ರೌಢಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮ-2016ರ ಪ್ರಕಾರ ಹಿಂದಿ ಪ್ರಚಾರ ಸಭಾಗಳಿಂದ ಹಿಂದಿ ಬಿ.ಇಡಿ. ಪದವಿ ಪಡೆದ ವಿದ್ಯಾರ್ಥಿಗಳು ಹಿಂದಿ ಶಿಕ್ಷಕರ ನೇಮಕಾತಿಗೆ ಅರ್ಜಿ ಸಲ್ಲಿಸಲು ಅನರ್ಹರಾಗಿರುವರು.

ಆದ್ದರಿಂದ, ಸದರಿ ಪರೀಕ್ಷೆ / ಪದವಿಗಳಿಗೆ ತತ್ಸಮಾನತೆಯನ್ನು ಪರಿಗಣಿಸಿ ನೀಡಿರುವ ಸರ್ಕಾರದ ಆದೇಶಗಳನ್ನು ಸರ್ಕಾರದ ಆದೇಶ ಸಂಖ್ಯೆ: ಇಡಿ 25 ಎಲ್‌ಬಿಪಿ 2017 ದಿನಾಂಕ: 18/04/2017ರಲ್ಲಿ ರದ್ದುಪಡಿಸಲಾಗಿರುತ್ತದೆ.

ಪ್ರಸ್ತುತ ಚಾಲ್ತಿಯಲ್ಲಿರುವ 2016ರ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಅನುಸರಿಸಿ ಪ್ರೌಢ ಶಾಲಾ ಹಿಂದಿ ಸಹ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ.

**ಇಪಿ 57 ಎಲ್‌ಬಿಪಿ 2022**

**(ಬಿ.ಸಿ. ನಾಗೇಶ್)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ**
**ಸಕಾಲ ಸಚಿವರು.**